CC 637/2018
P.W.:2

ಈ ದಿನ ದಿಃ16.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಜೆ.ಹೆಚ್.ಕೆ ವಕೀಲರಿಂದಃ

1. ಆರೋಪಿ ಎಷ್ಟು ವರ್ಷಗಳಿಂದ ನಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ಆರೋಪಿ ಖಾತೆಗೆ ಸಂಬಂಧಿಸಿದಂತೆ ಆದಂತಹ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯ ಖಾತೆಯು 2022ನೇ ಇಸವಿಯಲ್ಲಿ ಮುಕ್ತಾಯಗೊಂಡಿರುತ್ತದೆ ಮತ್ತು ನಾನು ಮೇ 2023ನೇ ಸಾಲಿನಿಂದ ಕನಕಪುರ ಶಾಖೆಗೆ ಕೆಲಸಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಖಾತೆಗೆ ಸಂಬಂಧಿಸಿದ ಚೆಕ್ಕುಗಳಿಗೆ ಸಂಬಂಧಿಸಿದಂತೆ ನಾನು ಈ ಪ್ರಕರಣವಲ್ಲದೆ ಬೇರೆ ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿಲ್ಲ.

2. ಆರೋಪಿ ಮತ್ತು ಪಿರ್ಯಾದಿಯ ನಡುವೆ ಯಾವ ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿ ಹಾಕಲಾದ ಚೆಕ್ಕನ್ನು ಕೊಟ್ಟಿದ್ದರು ಎಂಬ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಪಿರ್ಯಾದುದಾರರ ಮೂಲಕ ನ್ಯಾಯಾಲಯದಿಂದ ನೋಟಿಸ್ ಬಂದಿದ್ದಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

3. ನಿಪಿ-82 ರಿಂದ ನಿಪಿ-87ರ ಚೆಕ್ಕುಗಳು ನಮ್ಮ ಬ್ಯಾಂಕಿಗೆ ನಗದೀಕರಣಕ್ಕಾಗಿ ಪಿರ್ಯಾದುದಾರರು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

CC 637/2018
P.W.:2

ನುಡಿಯುತ್ತಾರೆ. ನಿಪಿ-1ಕ್ಕೆ ಸಂಬಂಧಿಸಿದಂತೆ ನಮ್ಮ ಬ್ಯಾಂಕಿನಿಂದ ಕೆನರಾ ಬ್ಯಾಂಕ್ ಹಾರೋಹಳ್ಳಿ ಶಾಖೆಗೆ ಹಿಂಬರಹವನ್ನು ದಿನಾಂಕ.10.05.2018ರಂದು ಕಳುಹಿಸಲಾಗಿರುತ್ತದೆ. ನಿಪಿ-2ನ್ನು ಕೊಡುವ ಕಾಲಕ್ಕೆ ನಾನು ಐಡಿಬಿಐ ಬ್ಯಾಂಕ್, ಕನಕಪುರ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2018ನೇ ಸಾಲಿನಲ್ಲಿ ನಾನು ಸದರಿ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸದೆ ಇರುವ ಕಾರಣಕ್ಕೆ ನಿಪಿ-2ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ತಮ್ಮ ಅನುಕೂಲಕ್ಕಾಗಿ ನನ್ನನ್ನು ಸಾಕ್ಷಿದಾರನಾಗಿ ಮಾಡಿ ನನ್ನ ಮೂಲಕ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

(ರಾಧ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.